ಜೆ. ಆದಿನಾರಾಯಣಮುನಿ, ಬೆಂಗಳೂರು
ಬ್ರೇಕ್ ಹಾಕಿದರೂ ನಿಲ್ಲದೆ ಓಡುವ ಗಾಡಿ ಯಾವುದು?



ಮನಸ್ಸು.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ತಂದೆ–ತಾಯಿಯರ ಪೋಷಣೆಯಲ್ಲಿ ಬೆಳೆದರೂ ನಂತರ ಅವರನ್ನು ನಿರ್ಲಕ್ಷ್ಯಿಸುವುದೇಕೆ?
ವೃಕ್ಷನ್ಯಾಯ. ಉದುರಿದ ಹೂ, ಹಣ್ಣುಗಳಿಗೆ ಬೇರಿನ ಬಗ್ಗೆ ಕಾಳಜಿ ಇರುವುದಿಲ್ಲ.

ಮಹಾವೀರ ಕಾಸರ, ಶಿವಮೊಗ್ಗ
ಟೀವಿ ಮಾಧ್ಯಮಗಳಲ್ಲಿ ಕನ್ನಡ ಶಬ್ದಗಳ ಕೊಲೆಯಾಗುತ್ತಿರುವುದನ್ನು ನೋಡಿ ಏನು ಮಾಡಬೇಕೆಂದು ತೋಚುತ್ತಿಲ್ಲವಲ್ಲಾ...?
ಸಿಂಪಲ್. ಟೀವಿ ಆಫ್ ಮಾಡಿ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಶೇಕಡಾ ನೂರು ಯಶಸ್ವಿ ದಾಂಪತ್ಯ ಯಾವಾಗ?
ದ್ರೌಪದಿಗೆ ದೊರೆತ ಭೀಮನಂತಹ ಪತಿ ಇರುವಾಗ.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು
ಯಾವ ಹೂವು ಬೆಂಕಿಯಲ್ಲಿ ಅರಳುತ್ತದೆ?



ಚಿನ್ನದ ಹೂವು ಎಂದನಾ ಅಕ್ಕಸಾಲಿಗ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಸಹೋದರರ ಆಸ್ತಿ ಜಗಳಕ್ಕೆ ಏಕೆ ಮಹಾಭಾರತ ಎನ್ನುತ್ತಾರೆ?
ಆಸ್ತಿಗಾಗಿ ಮ–ಮನಸ್ತಾಪ; ಹಾ–ಹಾವಳಿ; ಭಾ–ಭಾನಗಡಿ; ರ–ರಗಳೆ; ತ–ತಗಾದೆ ಇರುವುದರಿಂದ.

ರಾಮಸ್ವಾಮಿ ಭೀಮನಕಟ್ಟೆ, ಬೆಂಗಳೂರು
ಅಮಲಾಪುರದ ಸಬಲೆಯರು ಎಂಬ ಚಿತ್ರ ಮಾಡುತ್ತಿದ್ದೇನೆ. ಸ್ಕ್ರಿಪ್ಟ್ ಬರೆದು ಕೊಡುವಿರಾ?
ಅಂತಹ ಅಡ್ಡಾದಿಡ್ಡಿ ಸ್ಕ್ರಿಪ್ಟಿಗೆ ಬಾರ್ಕಿಂಗ್ ನ್ಯೂಸ್ ಮಗ್ಗೇಶನೇ ಬೆಸ್ಟಂತೆ.

ಅಮರಯ್ಯ ಪತ್ರಿಮಠ, ಸುರಪುರ
ದಾನ ಮಾಡುವವರು, ಪಡೆಯುವವರು ಹೇಗಿರಬೇಕು?
ಕೊಟ್ಟವರಿಗೆ ಮತ್ತಷ್ಟು ಕೊಡುವ ಬಯಕೆ ಇರಬೇಕು; ಪಡೆದವರಿಗೆ ಇಷ್ಟೇ ಸಾಕೆಂಬ ತೃಪ್ತಿ ಇರಬೇಕು.

ಕಮಲಾದೇವಿ ಆರ್. ಹಳ್ಳೂರ್, ಬೆಂಗಳೂರು
ಪ್ಲವ ಸಂವತ್ಸರ ಪ್ರಸ್ತುತ ನಡೆಯುತ್ತಿರುವ ವಿಪ್ಲವಗಳನ್ನು ದೂರಗೊಳಿಸಬಹುದೆ?
ರೂಢೀಗತ, ಮಾನಸಿಕ ಶಾರ್ವರಿಯನ್ನು ಜಯಿಸಿದರೆ ಪ್ಲವ ವಿಪ್ಲವ ಕಳೆದು ಶುಭಕೃತ್ ಆಗುತ್ತದೆ.

ಪಿ. ಜಯವಂತ ಪೈ, ಕುಂದಾಪುರ
ಅಭಿಪ್ರಾಯ ಭೇದಕ್ಕೂ, ಭಿನ್ನಾಭಿಪ್ರಾಯಕ್ಕೂ ವ್ಯತ್ಯಾಸವೇನು?
ಅಭಿಪ್ರಾಯ ಭೇದ **muscle tear;** ಭಿನ್ನಾಭಿಪ್ರಾಯ **Fracture.**

ಪ್ರವೀಣ ಕೊಣ್ಣೂರಮಠ, ಜಮಖಂಡಿ
ಪ್ರೀತಿಗೆ ಕಣ್ಣಿಲ್ಲ ಎನ್ನುತ್ತಾರೆ. ಇದು ನಿಜವೆ?
ಸುರಸುಂದರವಾನರರೂಪಿಣಿ; ಅಪ್ಸರೆ ಹುಚ್ಚುದ್ರಾಬೆ ಜೋಡಿಗಳನ್ನು ನೋಡಿದಾಗ ನಿಜವೆನಿಸುತ್ತದೆ.

ವಿ. ಹಮೀದ್, ವಿಟ್ಲ
ಮೊಬೈಲಲ್ಲೇ ಲವ್ ಸ್ಟಾರ್ಟ್ ಆಗಿ ಮೊಬೈಲಲ್ಲೇ ಎಂಡ್ ಆಯಿತು. ಕಾರಣ?
ಕರೆನ್ಸಿ ಕ್ಲೋಸ್ ಆಗಿತ್ತು.

ಬಿ.ಆರ್. ಉಷಾ, ಬೆಂಗಳೂರು
ಹಣ ಅಂದ್ರೆ ಹೆಣವೂ ಬಾಯಿ ಬಿಡುತ್ತೆ ಅಂತಾರೆ. ಹಾಕಿದ್ರೂ ಬಾಯಿ ಬಿಡಲಿಲ್ಲ. ಏಕೆ?
ಸರ್ಕಾರಿ ನೌಕರನ ಹೆಣವಂತೆ. ನೋಟಿಗೆ ಪೌಡರ್ ಹಾಕಿದೆಯೆಂದು ಗುಮಾನಿ ಬಂದಿರಬೇಕು.

ವಿ. ಹೇಮಂತಕುಮಾರ್, ಬೆಂಗಳೂರು
ನರ್ಸನ್ನು ಸಿಸ್ಟರ್ ಎನ್ನುತ್ತಾರೆ. ಏಕೆ?
ಅದು ಅಸಿಸ್ಟರ್ ಪದದ ಅಪಭ್ರಂಶವಂತೆ.

## ಬಹುಮಾನಿತ ಪ್ರಶ್ನೆ

ಗಂಜಾಂ ನಾಗರಾಜ್, ಮೈಸೂರು
ದೇವರಿಗೆ ನಮಸ್ಕಾರ ಮಾಡುವಾಗ ಜನರು ಎರಡೂ ಕಣ್ಣುಗಳನ್ನು ಮುಚ್ಚಿಕೊಳ್ಳುವುದೇಕೆ?
ಒಂದು ಕಣ್ಣು ಮುಚ್ಚಿಕೊಂಡರೆ ನನಗೇ ಕಣ್ಣು ಹೊಡೆಯುತ್ತೀಯಾ... ಎಂದು ದೇವರು ಶಾಪ ಕೊಡುವನಂತೆ.

ಎನ್. ವೈದೇಹಿ, ಮೈಸೂರು
ಸುಖ**villa** ಎಂಬುದರ ಅಸಲಿ ಅರ್ಥವೇನು ರಾಮ್?
**veracity, individuality, love, legality, amicability** ಸುಖಕ್ಕೆ ಆಧಾರ ಎಂದು.

ನಾಗರಾಜ್ ಮಾದೇಗೌಡ, ಕನಕಪುರ
ಸತ್ತವರನ್ನು ಹೂಳುವುದಕ್ಕೂ ಶುಭಗಳಿಗೆಗಾಗಿ ಕಾಯುವುದರ ಹಿಂದಿನ ಉದ್ದೇಶವೇನು?
ಆತ್ಮ ಸಂತೋಷಕ್ಕಾಗಿ.

ವಿಜಯಕುಮಾರ್ ಎಚ್.ಕೆ. ರಾಯಚೂರು
ಪಿಂಡಗಳನ್ನು ಕಾಗೆಗಳೇ ತಿಂದರೆ ಆತ್ಮಕ್ಕೆ ಶಾಂತಿ ಎನ್ನುವರಲ್ಲ, ಏಕೆ?



ಬೇರೆ ಪಕ್ಷಿಗಳು ಹಂಚಿ ತಿನ್ನದೆ ಪಿಂಡ ಮಿಕ್ಕುಬಿಟ್ಟರೆ ಆತ್ಮ ಅರೆದಾರಿ ಮಾತ್ರ ಸಾಗಿ ಅಂತರ್ಪಿಶಾಚಿ ಆಗುವುದಂತೆ.

ಜಗದೀಶ ಬಿ. ಮೈಸೂರು
ಇಲ್ಲೊಬ್ಬರು ಜಾತಿ ಮತ್ತು ಧರ್ಮ ಕಾಲಂಗೆ ಜಾತ್ಯತೀತ, ಧರ್ಮಾತೀತ ಅಂತ ಬರೆದಿದ್ದಾರೆ. ಮುಂದೆ?
ಮೀಸಲಾತೀತ ಎನ್ನುತ್ತದೆ ಸರ್ಕಾರ.

ಆರ್. ಮಧುಸೂದನ್, ಹಾಸನ
ಚೆಂದದ ಹೆಣ್ಣಿನ ಬಗ್ಗೆ ಮಾತನಾಡುವಾಗ ಕೈ ತೊಳೆದು ಮುಟ್ಟಬೇಕು ಎನ್ನುವುದೇಕೆ?
ಗಲೀಜು ಕೈಯಲ್ಲಿ ಮುಟ್ಟಲು ಹೋದರೆ ಮೂಲೆಯದನ್ನು ಕೈಗೆತ್ತಿಕೊಳ್ಳುವಳಂತೆ.

**ರಾಮ್**

ಪ್ರಶ್ನೆಯನ್ನು ಕಳಿಸಲು: **editorsu@sudha.co.in**